<u>ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ</u>

<u>ರಾಣೇಬೆನ್ನೂರು.</u>

<u>ಎಮ್ ವಿ ಸಿ ನಂಬರಃ 777/2021</u>

ಆರ್ ಡಬ್ಲ್ಯೂ–1

**ಸಾಕ್ಷಿದಾರರ ಹೆಸರು** : ಡಾ ಶೇಖ ಮಯುನಿದ್ದೀನ್

**ತಂದೆ/ಗಂಡನ ಹೆಸರು** : ಎ ಎಮ್ ಜಲಾಲ್

**ವಯಸ್ಸು** : 36 ವರ್ಷ

**ಉದ್ಯೊಗ** : ಮೆಡಿಕಲ್ ಆಪಿಸರ್ ಮೆಗ್ಗಾನ ಆಸ್ಪತ್ರೆ ಶಿವಮೊಗ್ಗ

**ವಾಸ** : ಶಿವಮೊಗ್ಗ

<u>ದಿನಾಂಕಃ 07–11–2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಖ್ಯ ವಿಚಾರಣೆಃ 2 ನೇ ಎದುರುದಾರರ ಪರ ಶ್ರೀ ಎನ್ ಡಿ ವಕೀಲರಿಂದಃ</u>

ನ್ಯಾಯಾಲಯದ ಸಮನ್ಸ ಮೇರೆಗೆ ನಾನು ಅರ್ಜಿದಾರರಿಗೆ ಸಂಬಂದಪಟ್ಟ ಮೂಲ ಎಮ್ ಎಲ್ ಸಿ, ಕೇಸ್ ಶೀಟ್ ಹಾಗೂ ಎಕ್ಸರೆಯನ್ನು ಹಾಜರುಪಡಿಸಿರುತ್ತೇನೆ.

ಮೂಲ ಎಮ್ ಎಲ್ ಸಿ ರಿಜಿಸ್ಟರ್ ಹಾಗೂ ದೃಡೀಕೃತ ಎಮ್ ಎಲ್ ಸಿ ನಕಲನ್ನು ಹಾಜರುಪಡಿಸುತ್ತಿದ್ದೇನೆ. ಸದರಿ ಮೂಲ ರಿಜಿಸ್ಟರು ದಿನನಿತ್ಯದ ಬಳಕೆಗೆ ಬೇಕಾಗಿರುವುದರಿಂದ ಅದನ್ನು ಸಾಕ್ಷಿಗೆ ವಾಪಸ್ಸು ಮಾಡಿ ಅದರ ದೃಡೀಕೃತ ನಕಲು ಸರಿಯಾಗಿರುವುದರಿಂದ ಅರ್ಜಿದಾರರಿಗೆ ಸಂಬಂದಪಟ್ಟ ಎಮ್ ಎಲ್ ಸಿ ಎಕ್ಸಟ್ರಾಕ್ಟನ ದೃಡೀಕೃತ ನಕಲನ್ನು ನಿ ಆರ್ –1 ಎಂದು ಗುರುತಿಸಲಾಯಿತು.

ಅರ್ಜಿದಾರರಿಗೆ ಸಂಬಂದಪಟ್ಟ ಕೇಸ್ ಶೀಟ್ ನ್ನು ನಿ ಆರ್ –2 ಎಂದು, 4 ಎಕ್ಸರೆಗಳನ್ನು ನಿ ಆರ್ –3 ಎಂದು ಗುರುತಿಸಲಾಯಿತು.

ಅರ್ಜಿದಾರರು ದಿನಾಂಕ 26.08.2020 ರಂದು ರಾತ್ರಿ 10.45 ಗಂಟೆಗೆ ನಮ್ಮ ಆಸ್ಪತ್ರೆಗೆ ಬಂದಿರುತ್ತಾರೆ. ಸದರಿಯವರಿಗೆ ಪ್ರಥಮ ಚಿಕಿತ್ಸೆ ಮಾಡಿರುತ್ತೇವೆ. ಸದರಿಯವರಿಗೆ ಎಕ್ಸರೆ ಮಾಡಿಸಿ ಮುಂದುವರೆದ ಚಿಕಿತ್ಸೆಗಾಗಿ ಎಲುಬು ಮೂಳೆ ತಜ್ಞರಿಗೆ ರೆಪರ್ ಮಾಡಿರುತ್ತೇವೆ. ಸದರಿ ಅರ್ಜಿದಾರರ ಜೊತೆ ಬಾಬುಜಾನ್ ರವರು ಬಂದಿರುತ್ತಾರೆ. ಕರೆದುಕೊಂಡು ಬಂದ ವ್ಯಕ್ತಿಯ ಸಹಿಯನ್ನು ಕಡ್ಡಾಯವಾಗಿ ತೆಗೆದುಕೊಳ್ಳುತ್ತೇವೆ ಸರಿ ಅವರ ಸಹಿಯನ್ನು ಎಮ್ ಎಲ್ ಸಿ ಪಡೆದುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಗಾಯಾಳುವಿಗೆ ಪ್ರಥಮ ಚಿಕಿತ್ಸೆ ನೀಡಿದ ವೈದ್ಯರೇ ಗಾಯದ ಪ್ರಮಾಣ ಪತ್ರವನ್ನು ನೀಡಬೇಕು ಎಂದರೆ ಸರಿ. ಅರ್ಜಿದಾರರಿಗೆ ಡಾ. ರಾಮಚಂದ್ರ ಬಾದಾಮಿ ಎಂಬುವವರು ಚಿಕಿತ್ಸೆ ಕೊಟ್ಟಿರುತ್ತಾರೆ. ಸದರಿ ವೈದ್ಯರು ಚಿಕಿತ್ಸೆ ಕೊಟ್ಟ ಬಗ್ಗೆ

ಅವರ ಸಹಿ ಕೇಸ್ ಶೀಟ್ ನಲ್ಲಿ ಇದೆ. ಸದರಿ ವೈದ್ಯರೇ ಅರ್ಜಿದಾರರಿಗೆ ಸಂಪೂರ್ಣವಾಗಿ ಚಿಕಿತ್ಸೆ ಕೊಟ್ಟಿರುತ್ತಾರೆ ಎಂದರೆ ಸರಿ. ಸಂಪೂರ್ಣ ಚಿಕಿತ್ಸೆ ನೀಡಿದ ವೈದ್ಯರೇ ಡಿಸ್ಚಾರ್ಜ ಸಮ್ಮರಿ ಕೊಡುತ್ತಾರೆ ಎಂದರೆ ಸರಿ. ನಮ್ಮ ಆಸ್ಪತ್ರೆಯಲ್ಲಿ ಡಿಜಿಟಲ್ ಎಕ್ಸರ್ ಇದೆ ಎಂದರೆ ಸರಿ. ಸದರಿ ಡಿಜಿಟಲ್ ಎಕ್ಸರೆ ತೆಗೆದ ಬಗ್ಗೆ ರಿಜಿಸ್ಟರ್ ನ್ನು ನಿರ್ವಹಣೆ ಮಾಡುತ್ತಾರೆ ಎಂದರೆ ಸಿಸ್ಟಮ್ ನಲ್ಲಿ ಮಾಡುತ್ತಾರೆ ಎಂದು ನುಡಿಯುತ್ತಾರೆ. ಡಿಜಿಟಲ್ ಎಕ್ಸರೆಯನ್ನು ಹೊರಗಡೆ ಕೊಡಲು ಬರುವುದಿಲ್ಲ ಎಂದರೆ ನಿಜ. ನಮ್ಮ ಆಸ್ಪತ್ರೆಯಲ್ಲಿ ಡಿಜಿಟಲ್ ಎಕ್ಸರೆ 2021 ರಿಂದ ಬಂದಿರುತ್ತದೆ. ಡಿಜಿಟಲ್ ಎಕ್ಸರೆ ಇದ್ದರೆ ನಿ ಆರ್ -3 ರಂತೆ ಕೊಡಲು ಬರುವುದಿಲ್ಲ ಎಂದರೆ ಸರಿ. ಸದರಿ ಡಿಜಿಟಲ್ ಎಕ್ಸರೆ ಕೊಡಬೇಕಾದರೆ ನಮ್ಮ ಮೇಲಾಧಿಕಾರಿಯ ಅನುಮತಿ ಪಡೆದುಕೊಂಡು ಕೊಡಬೇಕು ಎಂದರೆ ನಿಜ. ನಾನು ಹಾಜರುಪಡಿಸಿದ ಎಕ್ಸರೆಗಳು ಅರ್ಜಿದಾರರಿಗೆ ಸಂಬಂದಪಟ್ಟವುಗಳಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಎಸ್ ವಿ ಎಮ್ ವಕೀಲರಿಂದಃ</u>**

ಅಪಘಾತದ ನಂತರ ಅರ್ಜಿದಾರರು ಪ್ರಥಮವಾಗಿ ಹೊನ್ನಾಳಿಯ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ನಂತರ ಆ ಆಸ್ಪತ್ರೆಯಿಂದ ನಮ್ಮ ಆಸ್ಪತ್ರೆಗೆ ರೆಪರ್ ಆಗಿದ್ದರು ಎಂದರೆ ಸರಿ. ಸದರಿ ಸಂಗತಿಯನ್ನು ಎಮ್ ಎಲ್ ಸಿ ಹಾಗೂ ಕೇಸ್ ಶೀಟನಲ್ಲಿ ನಮೂದಿಸಿರುತ್ತೇನೆ. ನಮ್ಮ ಆಸ್ಪತ್ರೆಯವರು ಹೊನ್ನಾಳಿಯ ಆಸ್ಪತ್ರೆಯವರಿಗೆ ಅರ್ಜಿದಾರರಿಗೆ ಸಂಬಂದಪಟ್ಟ ಪೀಡ್ ಬ್ಯಾಕ್ ಸರ್ಟಿಪಿಕೇಟನ್ನು ಕೊಟ್ಟಿರುತ್ತೇನೆ. ಅರ್ಜಿದಾರರಿಗೆ ಆದ ಗಾಯಗಳನ್ನು ಕೇಸ್ ಶೀಟನಲ್ಲಿ ನಮೂದಿಸಿರುತ್ತೇನೆ. ಬಲ ತೊಡೆಗೆ ಮೂಳೆ ಮುರಿತ ಆದ ಬಗ್ಗೆ ಅರ್ಜಿದಾರರಿಗೆ ಶಸ್ತ್ರ ಚಿಕಿತ್ಸೆ ಮಾಡಿರುತ್ತೇನೆ. ಉಳಿದ ಮೂಳೆ ಮುರಿತದ ಗಾಯಗಳಿಗೆ ಸಾಂಪ್ರದಾಯಿಕ ಚಿಕಿತ್ಸೆ ಕೊಟ್ಟಿರುತ್ತೇನೆ. ಆ ಬಗ್ಗೆ ಕೇಸ್ ಶೀಟನಲ್ಲಿ ನಮೂದು ಮಾಡಲಾಗಿದೆ. ಸಮಯದಲ್ಲಿ ಅಪಘಾತವಾಗಿರುತ್ತದೆ. ನಿ ಆರ್ -3 ಯಲ್ಲಿ ಅರ್ಜಿದಾರರ ಹೆಸರು, ಒಪಿ ನಂಬರು ಮತ್ತು ದಿನಾಂಕವನ್ನು ನಮೂದು ಮಾಡಲಾಗಿದೆ ಎಂದರೆ ಸರಿ. ಸದರಿ ಎಕ್ಸರೆಗಳನ್ನು ಅರ್ಜಿದಾರರಿಗೆ ಚಿಕಿತ್ಸೆ ನೀಡುವಾಗ ತೆಗೆದ ಎಕ್ಸರೆಗಳು ಎಂದರೆ ಸರಿ.

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/-

(ಶ್ರೀಮತಿ ಹುಲ್ಲೂರ ಹೇಮಲತಾ ಬಸಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.